ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿz

| | | |
|---|---|---|
| **ಸಾಕ್ಷಿದಾರನ ಹೆಸರು** | : | ಶಿವಲಿಂಗ ಭತಗೌಡರ |
| **ತಂದೆ ಹೆಸರು** | : | ಮಲ್ಲನಗೌಡ |
| **ವಯಸ್ಸು** | : | 50 ವರ್ಷ |
| **ಉದ್ಯೋಗ** | : | **ಎ ಎಸ್ ಐ,** ಸಿಂದಗಿ |
| **ವಾಸ ಸ್ಥಳ** | : | ಸಿಂದಗಿ |

**ದಿನಾಂಕಃ** 11.08.2026 **ರಂದು ಸಾಕ್ಷಿಗೆ ಪ್ರಮಾಣಿಕರಿಸಲಾಯಿತು**

## ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.

ನಾನು 2016 ರಿಂದ 2024 ವರಗೆ ಸಿಂದಗಿ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡಿದ್ದೇನೆ.

**2.** ದಿ. 09.03.2024 **ರಂದು** ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಸಂಜೆ 07.00 ಗಂಟೆಗೆ ಚಾಸಾಃ1 ರವರು ನನ್ನ ಮುಂದೆ ಹಾಜರಾಗಿ ಗಣಕೀಕೃತ ಫಿರ್ಯಾದನ್ನು ಸಲ್ಲಿಸಿದ್ದು, ನಾನು ಅದನ್ನು ಸ್ವೀಕರಿಸಿ, ಠಾಣಾ ಗುನ್ನಾ ನಂಃ55/2024 ರಂತೆ ಪ್ರಕರಣ ದಾಖಲಿಸಿಕೊಂಡು ಮೂಲ ಫಿರ್ಯಾದನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ನಮ್ಮ ಮೇಲಾಧಿಕಾರಿಗೆ ಕಳುಹಿಸಿರುತ್ತೇನೆ. ದೂರು ಈಗಾಗಲೇ ನಿಪಿಃ7 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ7 ಎ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿಃ8 ಎಂದು , ಸಾಕ್ಷಿಯ ಸಹಿಯನ್ನು ನಿಪಿಃ8 ಎ ಎಂದು ಗುರುತಿಸಲಾಯಿತು.

2. ದಿಃ10.03.2024 ರಂದು ಗುನ್ನಾ ಜಾಗಕ್ಕೆ ಹೋಗಿ ಚಾಸಾಃ2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ.

ಅದು ಈಗಾಗಲೇ ನಿಪಿ:1 ಎಂದು ಗುರುತಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ:1 ಬಿ ಎಂದು ಗುರುತಿಸಲಾಯಿತು. ಫೋಟೋ ಈಗಾಗಲೇ ನಿಪಿ:2 ಎಂದು ಗುರುತಾಗಿರುತ್ತದೆ. ಅದೇ ದಿನ ಚಾಸಾ:4 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ:4 ರಿಂದ 7 ರವರು ಹೇಳಿದ ಪ್ರಕಾರವೇ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ:13 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲು: ಶ್ರೀ ಎ ಕೆ ಕೆ ಆರೋಪಿ ಪರ ವಕೀಲರಿಂದ:</u>

1. ಚಾಸಾ:2 ಮತ್ತು 3 ರವರಿಗೆ ಪಂಚರಾಗಲು ಬರುವಂತೆ ನೋಟಿಸ್ಸು ಕೊಟ್ಟು ಕರೆಸಿರುತ್ತೇನೆ. ಚಾಸಾ:4 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ:1 ರವರು ನೀಡಿರುವ ಸುಳ್ಳು ದೂರನ್ನು ಆಧರಿಸಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ:2 ಮತ್ತು 3 ರವರು ನನ್ನ ಜೊತೆ ಪಂಚನಾಮೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

**ಓ.ಹೇ.ಕೆ.ಸರಿ.ಇದೆ.**

**Sd/-**

**ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು**

**ಜೆ.ಎಮ್.ಎಫ್.ಸಿ. ಸಿಂದಗಿ**